ಉಂಡೆ ಕೊಬ್ಬರಿಗೆ ಬೆಲೆ ಏರಿಕೆಯ ಸಂತಸ

15 ಸಾವಿರ ರೂ.ಗಡಿ ದಾಟಿದ ಬೆಲೆ! ಕಳೆದ ಸಾಲಿನ ನಷ್ಟಕ್ಕೆ ಬೇಸತ್ತ ಬೆಳೆಗಾರರಲ್ಲಿ ನಿರಾಳ

* ಎಚ್.ಬಿ.ಸುಪ್ರತೀಕ್ ಪಶೇಮಟೆ

ತಿಪಟೂರು: ಕಳೆದ ಕೆಲವು ದಿನಗಳಿಂದ ಕೊಬ್ಬರಿ ಬೇಡಿಕೆ ಹೆಚ್ಚಳ ಹಿನ್ನೆಲೆಯಲ್ಲಿ ಬೆಲೆಯಲ್ಲಿ ಏರಿಕೆ ಕಂಡು ಬಂದಿದೆ. ತಿಪಟೂರು ಕೊಬ್ಬರಿ ಮಾರುಕಟ್ಟೆಯಲ್ಲಿ ಕ್ವಿಂಟಾಲ್ ಕೊಬ್ಬರಿ ಬೆಲೆಯೂ 15 ಸಾವಿರ ಗಡಿ ದಾಟಿರುವುದು ರೈತರ ಮೊಗದಲ್ಲಿ ಮಂದಹಾಸ ಮೂಡಿಸಿದೆ.

ಹಾಸನ್ಮ ನಗರ ತಿಪಟೂರಿನ ಎಪಿಎಂಸಿ ಕೊಬ್ಬರಿ ಮಾರುಕಟ್ಟೆಯಲ್ಲಿ ಕಳೆದ ಕೆಲವು ತಿಂಗಳುಗಳಿಂದ ನಿರಂತರವಾಗಿ ಕುಸಿತಕಂಡ ಕೊಬ್ಬರಿ ಬೆಲೆ ರೂಪಾಯಿ 7,500 ರಿಂದ ರೂಪಾಯಿ 8,000 ಗೆ ಬಂದು ನಿಂತಿತ್ತು. ಇದರಿಂದ ತೆಂಗು ಬೆಳೆಯಿಂದ ರೈತರನ್ನು ತಿವ್ರ ಆತಂಕಕ್ಕೆ ಕಾರಣವಾಗಿ ಆರ್ಥಿಕವಾಗಿ ಸಂಕಷ್ಟ ಎದುರಾಗಿತ್ತು ಆದರೆ ಕಳೆದ ಏರಡು ವಾರಗಳಿಂದ ಸ್ವಲ್ಪ ಚೇತರಿಕೆಗೊಂಡ ಕೊಬ್ಬರಿ ಧಾರಣೆಯಲ್ಲಿ ಕ್ವಿಂಟಾಲ್‌ಗೆ ರೂಪಾಯಿ 15 ಸಾವಿರಗಳನ್ನು ದಾಟಿದೆ.

ಬೆಗಾದರಲ್ಲಿ ಖುಷಿ ತರಿಸಿದೆ: ಕಳೆದ ವರ್ಷ ಕ್ವಿಂಟಾಲ್‌ಗೆ ರೂಪಾಯಿ 17 ರಿಂದ 18 ಸಾವಿರ ಇದ್ದ ಕೊಬ್ಬರಿ ಬೆಲೆ ಡಿಸೆಂಬರ್ 2022ರಲ್ಲಿ ದಿಢೀರನೆ 10,500 ರಿಂದ 12,000 ರೂ.ಗೆ ಕುಸಿದಿತ್ತು. ಕಳೆದ ಜನವರಿ 2023ಕ್ಕೆ ಆದು 11,000 ರೂ.ಗೆ ಇಳಿಕೆ ಕಂಡಿತ್ತು. ಅಲ್ಲಿಂದ ನಿರಂತರವಾಗಿ ಕುಸಿತ ಕಂಡ ಕೊಬ್ಬರಿ ಬೆಲೆಯಿಂದ ತೆಂಗು ಬೆಳೆಯಿಂದ ದೃತ್ತರಲ್ಲಿ ತಿವ್ರ ಆತಂಕ ಮೂಡಿತ್ತು. ಕೇಂದ್ರ ಸರಕಾರದ ನಾಫೆಡ್ ಮೂಲಕ ಕ್ವಿಂಟಾಲ್ ಕೊಬ್ಬರಿಗೆ ರೂಪಾಯಿ 12ಸಾವಿರ ಹಾಗೂ ರಾಜ್ಯ ಸರಕಾರದ ಪ್ರೋತ್ಸಾಹಧನ ರೂಪಾಯಿ 1,500 ಒಟ್ಟು ಕ್ವಿಂಟಾಲ್ ಕೊಬ್ಬರಿ ಬೆಲೆ ಏರಿಕೆ ಕಾಣದೆ ನಾಫೆಡ್ ತೆರವರೂ ರೂಪಾಯಿ 8 ಸಾವಿರದಿಂದ 10 ಸಾವಿರದ ಆಸುಪಾಸಿನಲ್ಲಿಯೇ ಏರಿಕೆಯನ್ನು ಕಾಣುತ್ತಿತ್ತು. ಇತ್ತೀಚಿನ ದಿನದಲ್ಲಿ ಪ್ರಕೃತಿಯಲ್ಲಿ ಹಾನಾಮಾನ ವೈವರಿತ್ಯಗಳಿಂದ ಮಳೆಯ ಹೆಚ್ಚಳವಾಗಿರುವುದರಿಂದ ಹಾಗೂ ರೈತರು ನೆಲ ಆಟ್ಟಗಳನ್ನು ಮಾಡಿರುವ ಪರಿಣಾಮ ಕೊಬ್ಬರಿಗೆ ಉತ್ತಮವಾದ ವಾತಾವರಣದ ಗಾಳಿಯಲ್ಲಿದೆ ಹೀಣಾಂಶ ಹೆಚ್ಚಳವಾಗಿದ್ದು ಕೊಬ್ಬರಿಯ ನಿರೀಕ್ಷತ ಮಟ್ಟದಲ್ಲಿ ರೈತರ ಕೈಸೆರದೆ ಹಂತ ಹಂತವಾಗಿ ಹೆಚ್ಚಳಕ್ಕೆ ಕಾರಣವಾಗಿದೆ.

ಇನ್ನಿನ ಮಟ್ಟಿನ ಸಾಧ್ಯತೆ ಹಾಗೂ ಉತ್ತಮ ವಾತಾವರಣವಿರುವ ಕೊಬ್ಬರಿಯಲ್ಲಿ ಸಿಹಿಯಾದ ರುಚಿ ಮತ್ತು ಗುಣಮಟ್ಟದಲ್ಲಿ ಹೆಚ್ಚಿರುವ ಕಾರಣ ಇಲ್ಲಿನ ಕೊಬ್ಬರಿಗೆ ಉತ್ತರ ಭಾರತದ ಹೆಚ್ಚಿನ ರಾಜ್ಯಗಳಲ್ಲಿ ಬಹಳ ಬೇಡಿಕೆಯಿದ್ದು ಅಲ್ಲಿ ಕೊಬ್ಬರಿಯನ್ನು ಅಡುಗೆಗೆ ಹಾಗೂ ಸಿಹಿ ಪದಾರ್ಥ ತಯಾರಿಕೆಗೆ ಹೆಚ್ಚು ಬಳಸುತ್ತಾರೆ. ಸೌಂದರ್ಯವರ್ಧಕ ವಸ್ತುಗಳ ತಯಾರಿಕೆ ಹಾಗೂ ಗುಣಮಟ್ಟದ ಎಣ್ಣೆ ತಯಾರಿಕೆಗೂ ಬಳಸುವುದರಿಂದ ಬೇಡಿಕೆ ಹೆಚ್ಚು ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡದ ಜಿಲ್ಲೆಗಳಲ್ಲಿ ಮಳೆಯ ಪ್ರಮಾಣವು ಹೆಚ್ಚಿದುದಿಂದ ಜನರ ದೇಹದ ಆರೋಗ್ಯಕ್ಕೆ ಆಡುಗೆಗೆ ಕೊಬ್ಬರಿ ಎಣ್ಣೆ ಬಳಕೆ ಪ್ರಮಾಣವು ಹೆಚ್ಚಳಗಾಗುತ್ತಿದ್ದು ರೈತರ ಕೊಬ್ಬರಿಗೆ ಒಳ್ಳೆಯ ಬೆಲೆಯನ್ನು ಸಿಗುತ್ತದೆ.

ಉತ್ತರ ಭಾರತದ ರಾಜ್ಯಗಳಲ್ಲಿ ಸಾಲು ಸಾಲು ಹಬ್ಬಗಳಿವೆ. ಆದರಲ್ಲೂ ದೀಪಾವಳಿ ಹಬ್ಬಕ್ಕೆ ಕೊಬ್ಬರಿ ಬೇಡಿಕೆ ಹೆಚ್ಚಿನ ಪ್ರಮಾಣದಲ್ಲಿ ಬರುವುದರಿಂದ ಹಿಂದೆ ಇದ್ದ ಕೊಬ್ಬರಿಯ ಬೆಲೆ ರೂಪಾಯಿ 17 ರಿಂದ 18 ಸಾವಿರ ನಿರೀಕ್ಷಿಸುವುದಾಗಿದೆ.



ಎಣ್ಣೆ ತಯಾರಿಕೆಯಿಂದ ಬೆಲೆ ಹೆಚ್ಚಳ

ನಾಫೆಡ್ ಮೂಲಕ ಆತಿ ಹೆಚ್ಚು ಕೊಬ್ಬರಿ ಖರೀದಿ ಯಾಗಿರುವುದು ಮತ್ತು ತಮಿಳುನಾಡು ಹಾಗೂ ಕೇರಳಕ್ಕೆ ಇಲ್ಲಿನ ಉಂಡೆ ಕೊಬ್ಬರಿಯನ್ನು ಎಣ್ಣೆ ತಯಾರಿಸಲು ಬಳಕೆಯಾಗಿದ್ದು ಕೊಬ್ಬರಿ ಬೆಲೆ ಏರಿಕೆಗೆ ಕಾರಣವಾಗಿದೆ. ಇತ್ತೀಚಿನ ದಿನದಲ್ಲಿ ಜನರು ಆರೋಗ್ಯದ ದೃತಿ ಜನರು ಹೆಚ್ಚಿನ ಪ್ರಮಾಣದಲ್ಲಿ ಅಡುಗೆಗೆ ಉತ್ತಮಮಾದಾಗಿರುವ ಕೊಬ್ಬರಿ ಎಣ್ಣೆ ಬಳಸಲು ಪ್ರಾರಂಭಿಸಿದರೆ ಕೊಬ್ಬರಿಗೆ ಬೇಡಿಕೆ ಹೆಚ್ಚಿ ಬೆಲೆ ಇನ್ನೂ ಹೆಚ್ಚಾಗುತ್ತದೆ.

> **ಕೊಬ್ಬರಿಯನ್ನು ಹೆಚ್ಚು ಬಳಸುತ್ತಿದ್ದ ಹೊರರಾಜ್ಯಗಳಾದ ಮಹಾರಾಷ್ಟ್ರ, ಗುಜರಾತ್, ರಾಜಸ್ಥಾನ್, ದೆಹಲಿ, ಉತ್ತರಪ್ರದೇಶ, ಮಧ್ಯಪ್ರದೇಶಗಳಲ್ಲಿ ಕೊಬ್ಬರಿ ಬೇಡಿಕೆಯಲ್ಲಿ ಕೂಂಚ ಏರಿಕೆ ಕಂಡು ಬಂದಿದೆ ಹಿಣೆಲೆಯಲ್ಲಿ ಬೆಲೆಯಲ್ಲಿಯೂ ಏರಿಕೆ ಕಂಡು ಬಂದಿದೆ ಎಂದು ರವಾಣಿದಾರರು ತಿಳಿಸುತ್ತಾರೆ. ದೀಪಾವಳಿಯ ಸಂದರ್ಭದಲ್ಲಿ ಕೊಬ್ಬರಿ ಬೆಲೆಯಲ್ಲಿ ಇನ್ನೂ ಏರಿಕೆ ಕಾಣುವ ಸಾಧ್ಯತೆಗಳು ಹೆಚ್ಚಾಗಿವೆ.**
>
> ■ ನ್ಯಾಮಗೌಡ, ಎಪಿಎಂಸಿ ಕಾರ್ಯದರ್ಶಿ ತಿಪಟೂರು.

ದಿಗಂತ ವಿಶೇಷ

ಕಿರು ಸುದ್ದಿ

ಮೀಸಲಾತಿ ರದ್ದು ಹೇಳಿಕೆಗೆ ವಿರೋಧ

ಬೆಂಗಳೂರು: ಲೋಕಸಭೆಯ ಪ್ರತಿಪಕ್ಷ ನಾಯಕಿ ರಾಹುಲ್ ಗಾಂಧಿ ಅಮೆರಿಕದಲ್ಲಿದ್ದು ಮೀಸಲಾತಿ ರದ್ದು ಮಾಡುವ ಹೇಳಿಕೆ ಕೊಟ್ಟಿದ್ದು, ಅದುಂದ ದೇಶಾದ್ಯಂತ ಪ್ರತಿಪಕ್ಷಗಳು, ದಲಿತ ಸಮುದಾಯಗಳು ಕುಪಿತಗೊಂಡಿವೆ ಎಂದು ವಿಧಾನ ಪರಿಷತ್ತಿನ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ತಿಳಿಸಿದರು.

ವಿಧಾನಸೌಧದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಂಗ್ರೆಸ್ ಮುಖಂಡರು ಈಗ ರಾಹುಲ್ ಹೇಳಿಕೆಗೆ ಉತ್ತರ ಕೊಡಲಾಗದೆ ತೇಜೆ ಹಾಕುವ ಕೆಲಸ ಮಾಡುತ್ತಿದ್ದಾರೆ. ದೇಶದ ಪ್ರಥಮ ಪ್ರಧಾನಿ ನೆಹರು ಆ ಕಾಲದಲ್ಲೇ ಇದನ್ನು ಹೇಳಿದರು.

ಮೀಸಲಾತಿ ರದ್ದು ಸರಿಯಾದ ಕ್ರಮವಲ್ಲ: ಇದೊಂದು ಅನಿಷ್ಟ ಇದುಂದ ದೇಶ ಉದ್ಧಾರವಾಗದು. ಇದರ ಬಗ್ಗೆ ನಾನೆ ಒಲವಿಲ್ಲ. ಎಂದು ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದರು ಎಂದು ವಿವರಿಸಿದರು. ಈ ಪತ್ರದ ಕುರಿತು ಪ್ರಧಾನಿ ನರೇಂದ್ರ ಮೋದಿ ಕೂಡ ಸದನದಲ್ಲಿ ಪ್ರಸ್ತಾಪ ಮಾಡಿ ಪತ್ರ ಪ್ರದರ್ಶನ ಮಾಡಿದ್ದರು ಎಂದರು. ಮೀಸಲಾತಿ ವಿಚಾರದಲ್ಲಿ ನೆಹರು ಅವರ ಮನೋಭಾವವನ್ನೇ ರಾಹುಲ್ ಪ್ರಸ್ತಾಪ ಮಾಡಿದ್ದಾರೆ. ಕಾಂಗ್ರೆಸ್ ದಲಿತ ವಿರೋಧಿ. ಕಾಂಗ್ರೆಸ್‌ಗರು ಹೇಳುವುದೊಂದು ಮಾಡುವುದೊಂದು. ಮೀಸಲಾತಿಗೆ ವಿರುದ್ಧವಾಗಿಯೇ ಇದ್ದಾರೆ. ಪೋಟೋ ಬ್ಯಾಂಕ್ ವಾಪಸ್ ಕಾಂಗ್ರೆಸ್‌ಕ್ಕಾಗಿ ಇವರು ಓಲೈಕೆ ಮಾಡಿ ಈ ರೀತಿ ಮಾಡುತ್ತಿದ್ದರು ಎಂದು ಟೀಕಿಸಿದರು. ರಾಹುಲ್ ಗಾಂಧಿ ಗೆ ಸಂವಿಧಾನ ಪಾಕ ಕಲಿಸಬೇಕಾಗಿದೆ. ಈ ಕಾಂಗ್ರೆಸ್‌ಗರು ಬಂದು ಕಲಿಸಬೇಕಾಗಿದೆ. ರಾಹುಲ್ ಗಾಂಧಿ ಮಾನಸಿಕ ಅಸ್ವಸ್ಥರಂತೆ ಭಾರತ ದೇಶದ ಮಾನಹಾನಿ ಮಾಡುವುದನ್ನು ಅಭ್ಯಾಸ ಮಾಡಿಕೊಂಡಿದ್ದಾರೆ. ಆಗಿರಬಾಗ್ಗೆ ಭಾರತ ದೇಶದ ಮಾನಹಾನಿ ಮಾಡುವುದನ್ನು ನಾವು ಗಮನಿಸುತ್ತಿದ್ದೇವೆ. ಇವರು ಪ್ರತಿಪಕ್ಷದ ನಾಯಕತಾಗಲು ಯೋಗ್ಯರೇ? ಇವರಿಗೆ ಎಂಥ ಪಾಠ ಕಲಿಸಬೇಕು ಎಂದು ಪ್ರಶ್ನಿಸಿದರು.

ಮೀಸಲಾತಿ ಯಾವ ಕಾರಣಕ್ಕೆ ಬಂದಿದೆ: ಬಡತನ ಎಂದರೇನು ಎಂಬುದು ನಿಮಗೆ ಗೊತ್ತಿದೆಯೇ? ನಿಜವೆಲ್ಲೂ ಶ್ರೀಮಂತಿಕೆಯಿಂದ ಮೆರೆಯುತ್ತಿದ್ದೀರಿ. ಬಡವರ ಬಗ್ಗೆ ಚಿಂತನೆ ಬೆಟ್ಟು ಅವರ ಶ್ರೇಯೋಭಿವೃದ್ಧಿ ಬಯಸುವುದು ಬಟ್ಟು ಮೀಸಲಾತಿ ತೆಗೆಯುವುದಾದರೆ ನಿಮ್ಮ ಕಾಂಗ್ರೆಸ್ ಪಕ್ಷದ ಈ ದೇಶದಿಂದಲೇ ಹೋಗಲಿದೆ ಎಂದು ವಿಶ್ವಾಸವಿದಂದ ನುಡಿದರು. ಕಾಂಗ್ರೆಸ್ ವಿರುದ್ಧ ಹೋರಾಟಕ್ಕೆ ನಾವು ಜನರನ್ನು ಸಜ್ಜುಗೊಳಿಸುತ್ತೇವೆ ಎಂದು ಪ್ರಕಟಿಸಿದರು. ವಿಧಾನಸೌಧದ ಸದನ್ನ ಕೇಶವ್ ಪ್ರಸಾದ್ ಸುದ್ದಿಗೋಷ್ಠಿಯಲ್ಲಿದ್ದರು.

ಉದ್ಯಮಶೀಲತಾ ತರಬೇತಿಗೆ ಮಹಿಳೆಯರಿಂದ ಆಹ್ವಾನ

ಬೆಂಗಳೂರು: ಅಡೆಕೆ ಸಂಶ್ಯೆಯ ಸ್ಥಂತ ಉದ್ಯಮ ಪ್ರಾರಂಭ ಮಾಡಲು ಬಯಸುವ ಮಹಿಳೆಯರಿಗೆ ಉದ್ಯಮಶೀಲತಾ ಅಭಿವೃದ್ಧಿ ತರಬೇತಿ ನೀಡಲಿದ್ದು, ಆಸಕ್ತರಿಂದ ಅರ್ಜಗಳನ್ನು ಆಹ್ವಾನಸಲಾಗಿದೆ. ಎಸ್.ಸಿಎಲ್‌ಎಸ್ ಮೀಟ್ಸ್ ಹಾಗೂ ಶಾಂಭ್ರಿಕೆಡೆಯಲ್ಲಿ ವಿದ್ಯಾಭ್ಯಾಸ ಮಾಡಿರುವ ಅರ್ಹ್ಯರ್ಗಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ಅಕ್ಟಾ 18 ರಿಂದ 50 ವರ್ಷದೊಳಗಿನ ಮಹಿಳೆಯರಿಗೆ 12 ದಿನಗಳ ಉದ್ಯಮಶೀಲತಾ ಅಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಸೆ.16 ರಿಂದ 28ರವರೆಗೆ ಅವೆಕ್ಷ ಸಂಶ್ಯೆಯಲ್ಲಿ ನಡೆಸಲಾಗುತ್ತದೆ. ಈ ತರಬೇತಿಯಲ್ಲಿ ಸೂಕ್ಷ್ಮ ಉದ್ಯಮಿಯ ಆಯ್ಕೆ, ಮಾರುಕಟ್ಟೆ, ಪ್ಯಾಕೇಜಿಂಗ್, ಸ್ಟಾಸಾಮರ್ಥ್ಯ ವಿಶ್ಲೇಷಣೆ, ವೆಚ್ಚದ, ಫೈನ್ಸ್, ಜೆಎಸ್‌ಟಿ, ಪೇಟೆಂಟ್, ಟ್ರೆಡ್ ಮಾರ್ಕ್, ಪುಸ್ತಕ ಬರೆಯುವುದು, ಸಮಯ ಪಾಲನೆ, ಮಾರುಕಟ್ಟೆ ಅನುಭವ, ಬ್ಯಾಂಕಿಂಗ್ ಹಾಗೂ ಸಾಲ ಸೌಲಭ್ಯದ ಚರ್ಚೆ, ಎಂಎಸ್‌ಎಂಇಯಿಂದ ನಾನಾ ಸ್ಕೀಮ್‌ಗಳ ಮಾಹಿತಿ, ಯೋಜನಾ ವರದಿ ತಯಾರಿಕೆ, ಕೈಗಾರಿಕಾ ಕೇಂದ್ರ, ಅಧಿಕಾರಿ ಜತೆ ಚರ್ಚೆ, ಸ್ಟಾಲ್ ಕೈಗಾರಿಕಾ ಘಟಕಗಳ ಭೇಟಿ, ಬೇರೆ ಬೇರೆ ದೇಶಗಳಿಗೆ ಸಂಬಂಧಿಸಿದಂತೆ ರಫ್ತು ಮತ್ತು ಆಮದು ಇನ್ನೂ ಮುಂತಾದ ಸ್ವಂತ ಉದ್ಯಮಗಳ ಸಂಬಂಧಿಸಿದಂತೆ ತರಬೇತಿ ನೀಡಲಾಗುತ್ತದೆ. ಹೆಚ್ಚಿನ ವಿವರಗಳಿಗಾಗಿ ಹಾಗೂ ಹೆಸರು ನೋಂದಾಣಿಗಾಗಿ ಎಸ್.ಸಿದಾಶಿವ, ಮುಖ್ಯ ತರಬೇತಿ ಸಂಯೋಜನಾಧಿಕಾರಿ, ಅವೆಕ್ಷ, ಬಿ-76, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು -10. ದೂರವಾಣಿ ಸಂಖ್ಯೆ: 23385874, 9880041360 ಇಲ್ಲಿ ಸಂಪರ್ಕಿಸುಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ತನಿಖೆಗೆ ಸಹಕರಿಸಲು ಅಧಿಕಾರಿಗಳಿಗೆ ಸೂಚಿಸಿದ ಹೈ

ಬೆಂಗಳೂರು: ಆದಾಯ ಮೀರಿದ ಆಸ್ತಿ ಗಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಾಜಿ ಸಹಾಯಕ ಆಯುಕ್ತ ಮತ್ತು ಭೂಸಾಮ್ಯೀಕರಾಧಿಕಾರಿಯಾಗಿದ್ದ ಕೆಎಎಸ್ ಅಧಿಕಾರಿ ರಾ. ಸುಧಾ ತನಿಖೆಗೆ ಸಹಕರಿಸದಿದ್ದರೆ ವಿಶೇಷ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸದಂತೆ ಲೋಕಾಯುಕ್ತಕ್ಕೆ ನಿರ್ದೇಶಿಸಿರುವ ಮಧ್ಯಂತರ ಆದೇಶವು ತೆರವಾಗಲಿದೆ ಎಂದು ಹೈಕೋರ್ಟ್ ಬುಧವಾರ ಆದೇಶಿಸಿದೆ. ಸಾಮಾಜಿಕ ಕಾರ್ಯಕರ್ತ ಟಿ.ಜೆ ಅಬ್ರಹಾಂ ಸಲ್ಲಿಸಿದ ದೂರು ಅಧರಿಸಿ ಭ್ರಷ್ಟಾಚಾರ ತಡೆ ಕಾಯ್ದೆಯಡಿ ಸ್ಥಾಪಿತವಾಗಿರುವ ವಿಶೇಷ ನ್ಯಾಯಾಲಯವು 2020ರ ಆ.20ರಂದು ಲೋಕಾಯುಕ್ತ ಪೊಲೀಸರಿಗೆ ತನಿಖೆ ನಡೆಸಲು ನಿರ್ದೇಶಿಸಿದಾಗ ಆದೇಶ ರದ್ದುಪಡಿಸುವಂತೆ ಕೋರಿ ರಾ. ಸುಧಾ ಮತ್ತು ಆಕೆಯ ಸಹಾಯಕ ಸ್ಟೋನ್ ಜೋಸೆಫ್ ಪಿಯಸ್ ಸಲ್ಲಿಸಿದಾವ ಅರ್ಜಿಯನ್ನು ನ್ಯಾಯಮೂರ್ತಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು. ಲೋಕಾಯುಕ್ತ ಪೊಲೀಸ್ ಪರವಾಗಿ ಹಾಜರಾಗಿದ್ದ ವಕೀಲ ಬಿ ಲತೀಶ್ ಅವರು ನ್ಯಾಯಾಲಯದ ಆದೇಶದ ಹೊರತಾಗಿಯೂ ಸುಧಾ ಅವರು ತನಿಖೆಗೆ ಸಹಕಾರ ನೀಡುತ್ತಿಲ್ಲ ಎಂದರು.

ಮರಳಕುಂಟೆ ಸಹಕಾರ ಸಂಘದ ಅಧ್ಯಕ್ಷರ ಆಯ್ಕೆ

ದಾಬಸ್ ಪೇಟೆ: ನೆಲಮಂಗಲ ತಾಲೂಕು ಸೋಂಪುರ ಹೋಬಳಿಯ ಮರಳಕುಂಟೆ ವಿಎಸ್‌ಎಸ್‌ಎನ್‌ದ ಪ್ರಾಥಮಿಕ ಸಹಕಾರ ಕೃಷಿ ಸಹಕಾರ ಸಂಘದಲ್ಲಿ ಅಧ್ಯಕ್ಷರಾಗಿ ಎಚ್ .ನಾಗೂಗೌಡರ್ ಹಾಗೂ ಉಪಾಧ್ಯಕ್ಷರಾಗಿ ಬಂಗಾರಯ್ಯ ನಿರ್ಮಲಾ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಕೆ.ಎನ್.ನಾಗಮಣಿ ಘೋಷಿಸಿದ್ದರೆ.

ನಿರ್ದೇಶಕರಾದ ಚಂದ್ರಶೇಖರ್, ಎಲ್. ನರಸಿಂಹಮೂರ್ತಿ, ಪ್ರಕಾಶ್, ರಾಜಣ್ಣ, ಲಿಂಗರಾಜು, ಮಾರಿಗಂಗಯ್ಯ , ರಮಚಂದ್ರಯ್ಯ, ಶಾರಾ, ಲೋಕೇಶ್, ರಂಗಸ್ವಾಮಯ್ಯ, ಸಿಇಓ. ನಾಗರಾಜು, ಬರಗೇನಹಳ್ಳಿಯ ಸಂಘದ ನಿರ್ದೇಶಕರಾದ ಎಂ.ಸ್ವಾಮ್ಯಪ್ಪ ರಾಮಯ್ಯ, ಬಿ.ಆರ್.ಪುಟ್ಟಗಂಗಯ್ಯ, ಬಿ.ಎನ್.ಶರಮೇಶ್, ಟಿಎಪಿಎಂಸಿ ಮುಖಂಡರಾದ ಬಗಡೆಗೂಡಿ ಬಸವೇಶ್ವರ, ಎಪಿಎಂಸಿ ಸದಸ್ಯ ಗೋಲ್ಡಶಿಟ್ ಗಂಗಣ್ಣ ಇವರನ್ನು ಅಭಿನಂದಿಸಿದರು.

ಸ್ಫೋಟಕ ವಸ್ತು ಅಕ್ರಮ ಸಾಗಣೆ: ಬಂಧನ

ಚಾಮರಾಜನಗರ: ತಾಲೂಕಿನ ಬೊಮ್ಮನಹಳ್ಳಿಗ್ರಾಮದ ಕಡೆಯಿಂದ ಬಂದ ಟ್ರಾಕ್ಟರ್‌ನೊಂದರಲ್ಲಿ ಅಕ್ರಮವಾಗಿ ಸ್ಫೋಟಕ ವಸ್ತುವನ್ನು ಸಾಗಿಸುತ್ತಿದ್ದ ಬಿಹಾರದ ಬಂಧಿಸಿದ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಹಿನಸಿಇ ಕೆ.ಎಂ.ಮುಹೇಶ್ ಅವರು ಸೆ.10ರಂದು ಬೆಳಗ್ಗೆ 11 ಗಂಟೆ ಸಮಯದಲ್ಲಿ ಕುರುಬರಹುಂಡಿ ಗ್ರಾಮದ ಕಡೆ ಗಸ್ತಿನಲ್ಲಿದ್ದಾಗ ಕಂಪ್ಯೂಸರ್ ಟ್ರ್ಯಾಕ್ಟರ್ ನಲ್ಲಿ ಅಕ್ರಮವಾಗಿ ಸ್ಫೋಟಕ ವಸ್ತುವನ್ನು ಇಟ್ಟುಕೊಂಡು ಜಮೀನಿನ ಕಡೆ ಕಲ್ಲನ್ನು ಸ್ಫೋಟ ಟಾಸು ತಯಾರಿ ಮಾಡುತ್ತಿದ್ದಾರೆಂಬ ಮಾಹಿತಿ ದೊರೆತಿದೆ. ಮಾಹಿತಿ ಮೇರೆಗೆ ಬೊಮ್ಮನಹಳ್ಳಿ ಗ್ರಾಮದ ಕಡೆಯಿಂದ ಇಬ್ಬರು ವ್ಯಕ್ತಿಗಳು ಕಂಪ್ಯೂಸರ್ ಟ್ರ್ಯಾಕ್ಟರ್‌ನಲ್ಲಿ ಬಂದ ವೇಳೆ ಪರಿಶೀಲಿಸಿದಾಗ ಸಿದ್ದರಾಮ ಮತ್ತು ರಾಜ ಎಂಬುವರ ವರನ್ನು ವಿಚಾರಣೆಗೊಳಪಡಿಸಿದಾಯ. ಟ್ರ್ಯಾಕ್ಟರನ ಮುಂಭಾಗದ ಎಡಭಾಗದಲ್ಲಿರುವ ಒಂದು ಬಾಕ್ಸ್ ನಲ್ಲಿ ಜೆಲ್‌ಸ್ಟಿಕ್, ಒಂದು ಕಬ್ಬಿಣದ ಪ್ಲಾಸ್ಟಿಕ್ ಕವರ್‌ನಲ್ಲಿ ಎಲೆಕ್ಟ್ರಿಕ್ ಡೆಟೊನೆಟರ್ ಹಾಗೂ ಬಿಡಿ ಕಂಡು ಬಂದಿತು. ಪ್ಲಾಸ್ಟಿಕ್ ಕವರ್‌ನಲ್ಲಿದ್ದ 9 ಎಲೆಕ್ಟ್ರಾನಿಕ್ ಡೆಟೊನೇಟರ್, ಅದಕ್ಕೆ ಅಳವಡಿಸಿರುವ ಬಿಡಿಯನ್ನು ಪರಿಶೀಲಿಸಲಾಯಿತು.

ಉದ್ಯೋಗ ಮೇಳ ಪ್ರಚಾರಕ್ಕೆ ಚಾಲನೆ

ಹೊಸಕೋಟೆ: ನಿರುದ್ಯೋಗಿ ಯುವಕ, ಯುವತಿಯರು ಸೆ.13ರಂದು ದೇವನಹಳ್ಳಿಯಲ್ಲಿ ನಡೆಯಲಿರುವ ಉದ್ಯೋಗ ಮೇಳದಲ್ಲಿ ಭಾಗವಹಿಸಿ ಅರ್ಹ ಉದ್ಯೋಗವನ್ನು ಪಡೆದು ಕೊಳ್ಳಬೇಕು ಎಂದು ಜಿಪಂ ಉಪ ಕಾರ್ಯದರ್ಶಿ ರಮೇಶ್ ಮನವಿ ಮಾಡಿದರು.

ನಗರದ ತಾಪಂ ಆವರಣದಲ್ಲಿ ಉದ್ಯೋಗ ರಥ ಪ್ರಚಾರವಾಹನಕ್ಕೆ ಚಾಲನೆನೀಡಿ ಅವರು ಮಾತನಾಡಿ, ಜಿಲ್ಲಾಡಳಿತದಿಂದ ಸೆ.13ರಂದು ದೇವನಹಳ್ಳಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಬೆಳಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಉದ್ಯೋಗ ಮೇಳ ನಡೆಯಲಿದೆಯೆಂದರು. ಜಿಲ್ಲೆಯಲ್ಲಿರುವ ನಡೆಯಲಿರುವ ಉದ್ಯೋಗ ಮೇಳದಲ್ಲಿ ಹತ್ತಾರು ಕಂಪನಿಗಳು ಭಾಗವಹಿಸಲಿವೆ. ನಿರುದ್ಯೋಗಿ ಯುವಕ -ಯುವತಿಯರು ಈ ಮೇಳದಲ್ಲಿ ಭಾಗವಸಿ ತಮ್ಮ ಆಸಕ್ತಿ ಕ್ಷೇತ್ರದ ಉದ್ಯೋಗ ವನ್ನು ಪಡೆದುಕೊಳ್ಳಲು ಅತ್ಯುತ್ತಮ ಅವಕಾಶವಿದೆ. ಇದನ್ನು ಅರ್ಹರು ಸದುಪಯೋಗಪಡಿಸಿಕೊಳ್ಳಬೇಕು ಎಂದು ತಿಳಿಸಿದರು. ಹೊಸಕೋಟೆ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಣಾಧಿಕಾರಿ ಡಾ.ಸಿ.ಎನ್.ನಾರಾಯಣ ಸ್ವಾಮಿ ಮಾತನಾಡಿ, ಹೊಸಕೋಟೆ ತಾಲೂಕಿನಲ್ಲಿರುವ ನಿರುದ್ಯೋಗಿಗಳಿಗೆ ಉದ್ಯೋಗ ವಕಾಶವನ್ನು ಪಡೆದುಕೊಳ್ಳಲು ಇದೊಂದು ಸಮಾವಕಾಶವಾಗಿದೆ ಎಂದುಹೇಳಿದರು. ಎಸ